**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.343/2019**

**(ಚಾ.ಸಾ.6/ಪ್ರಾ.ಸಾ.4)**

ತಾಃ15-02-2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಅಂಜಿನಪ್ಪ |
| ತಂದೆಯ ಹೆಸರು | ಸಂಜೀವಯ್ಯ |
| ವಯಸ್ಸು | 46 ವರ್ಷ |
| ಉದ್ಯೋಗ | ಬಟ್ಟೆ ವ್ಯಾಪಾರ |
| ವಾಸ ಸ್ಥಳ | ನೆಲಗುಳಿ, ಉತ್ತರಹಳ್ಳಿ ಹೋಬಳಿ |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

1. ಸಾಕ್ಷಿದಾರರು ನಿಪಿ.3 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ದಿನಾಂಕ 04-09-2018 ರ ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದ ಅದನ್ನು ನಿಪಿ.6 ಹಾಗೂ ಸಾಕ್ಷಿದಾರರ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ನಾನು ಸುಮಾರು 5 ವರ್ಷಗಳ ಹಿಂದೆ ಕಗ್ಗಲೀಪುರ ಪೊಲೀಸ್ ಠಾಣೆಗೆ ಹೋಗಿದ್ದ ಸಮಯದಲ್ಲಿ ಪೊಲೀಸರು ನಿಪಿ.3 ಮತ್ತು 6 ಕ್ಕೆ ನನ್ನ

ಸಹಿ ಪಡೆದಿರುತ್ತಾರೆ. ನಾನು ಈ ಕೇಸಿನ ಯಾವುದೇ ಆರೋಪಿತರನ್ನು ನೋಡಿರುವುದಿಲ್ಲ. 1 ರಿಂದ 4 ನೇ ಆರೋಪಿತರು ನಮ್ಮನ್ನು ಹಾಗೂ ಪೊಲೀಸರನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿ ಯಾವುದೇ ವಸ್ತುಗಳನ್ನಾಗಲೀ ಅಥವಾ ಮೃತ ದೇಹವನ್ನಾಗಲೀ ತೋರಿಸಿರುವುದಿಲ್ಲ. ಪೊಲೀಸ್ ಠಾಣೆಯಲ್ಲಿ ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

1. ದಿನಾಂಕ 02-09-2018 ರಂದು ಪೊಲೀಸರು ನನ್ನನ್ನು, ಚಾಸಾ.5 ಹಾಗೂ 7 ರವರನ್ನು ಮಧ್ಯಾಹ್ನ 01:00 ಗಂಟೆಯಲ್ಲಿ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು 1 ರಿಂದ 4 ನೇ ಆರೋಪಿತರನ್ನು ಬಂಧಿಸಿದ್ದು, ಅವರನ್ನು ವಿಚಾರಿಸಿದಾಗ ಹಳೇ ದ್ವೇಷದಿಂದ ಮಂಜುನಾಥ್ ಇವರನ್ನು ಕೊಲೆ ಮಾಡಿರುವುದಾಗಿ ಆರೋಪಿತರು ನಮ್ಮ ಸಮಕ್ಷಮ ಒಪ್ಪಿಕೊಂಡರು ಎಂದರೆ ಸರಿಯಲ್ಲ. ಸದರಿ ಆರೋಪಿತರು ಮಂಜುನಾಥ್ ಇವರನ್ನು ಕರೆದುಕೊಂಡು ಹೋದ ಸ್ಥಳ, ಕೊಲೆ ಮಾಡಿದ ಸ್ಥಳ, ಆತನ ಮೃತ ದೇಹವನ್ನು ಎಸೆದ ಸ್ಥಳವನ್ನು ತೋರಿಸುವುದಾಗಿ ನಮ್ಮ ಮುಂದೆ ಒಪ್ಪಿಕೊಂಡರು ಎಂದರೆ ಸರಿಯಲ್ಲ. ನಂತರ 1 ರಿಂದ 4 ನೇ ಆರೋಪಿತರು ನಮ್ಮನ್ನು, ಪೊಲೀಸರನ್ನು ಸೋಮನಹಳ್ಳಿ ಗೇಟ್,

ಜುಂಜಪ್ಪ ಲೇಔಟ್ ಬಳಿ ಇರುವ ಜಯರಾಮ್ ಇವರಿಗೆ ಸೇರಿದ ಜಮೀನಿನಲ್ಲಿದ್ದ ಸಿಮೆಂಟ್ ಹಾಲೋ ಬ್ಲಾಕ್ ಇಟ್ಟಿಗೆ ತಾಯಾರಿಕ ಫ್ಯಾಕ್ಟರಿ ಬಳಿ ಕರೆದುಕೊಂಡು ಹೋಗಿ ಅದೇ ಸ್ಥಳದಿಂದ ಮಂಜುನಾಥ್ ಇವರನ್ನು ಬೈಕ್ ನಿಂದ ಕರೆದುಕೊಂಡು ಹೋಗಿರುವುದಾಗಿ ತೋರಿಸಿದ್ದರು ಎಂದರೆ ಸರಿಯಲ್ಲ.

2. ನಂತರ 1 ನೇ ಆರೋಪಿ ನಮ್ಮನ್ನು ಹಾಗೂ ಪೊಲೀಸರನ್ನು ಚಿನ್ನಕುರ್ಚಿ ಬಳಿ ಇರುವ ದೊಡ್ಡಕಾಡು ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ 1 ರಿಂದ 11 ನೇ ಆರೋಪಿತರು ಸೇರಿಕೊಂಡು ಮಂಜುನಾಥ್ ಇವರಿಗೆ ಹೊಡೆದು ತಲೆ ಮೇಲೆ ಕಲ್ಲು ಎತ್ತಿ ಹಾಕಿ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿರುವುದಾಗಿ ಸ್ಥಳ ತೋರಿಸಿದ್ದರು ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿ ಸದರಿ ಸ್ಥಳದಿಂದ 100 ಮೀಟರ್ ದೂರದಲ್ಲಿ ಬಿದ್ದಿದ್ದ ಒಂದು ದಾರದ ತುಂಡನ್ನು ತೋರಿಸಿ ಅದರಿಂದ ಮಂಜುನಾಥ್ ಇವರನ್ನು ಕಟ್ಟಲು ಬಯಸಿದ್ದೆವು ಎಂದು ತಿಳಿಸಿದ್ದು, ಅದು ರಕ್ತದ ಕಲೆ ಆಗಿದ್ದು, ಅಲ್ಲಿಂದ 15 ಅಡಿ ದೂರದಲ್ಲಿ ಪೊದೆಯಲ್ಲಿ ಒಂದು ಕಲ್ಲು ಬಿದ್ದಿದ್ದು, ಅದೇ ಕಲ್ಲನ್ನು ಮಂಜುನಾಥ್ ಇವರ ತಲೆಯ ಮೇಲೆ ಹಾಕಿ ರಕ್ತಗಾಯ ಗೊಳಿಸಿರುವುದಾಗಿ ಹೇಳಿ ಒಂದು ದೊಡ್ಡ ಕಾಡು ಕಲ್ಲನ್ನು ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ರಕ್ತ ಬಿದ್ದಿದ್ದು, ಪೊಲೀಸರು ಮಾದರಿ ಮಣ್ಣು ಹಾಗೂ ರಕ್ತ ಮಿಶ್ರಿತ ಮಣ್ಣನ್ನು ಸಂಗ್ರಹಿಸಿ ಪ್ಲಾಸ್ಟಿಕ್ ಡಬ್ಬದಲ್ಲಿ ಹಾಕಿ, ಬಿಳಿ ಬಟ್ಟೆಯಲ್ಲಿ ಕಟ್ಟಿ, ಸೀಲ್ ಮಾಡಿ ಜಪ್ತಿಪಡಿಸಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ರಕ್ತದ ಕಲೆ ಇದ್ದ ದಾರ ಹಾಗೂ ಕಾಡು ಕಲ್ಲನ್ನು ನಮ್ಮ ಸಮಕ್ಷಮ ಅಮಾನತ್ತು ಪಡಿಸಿರುತ್ತಾರೆ ಎಂದರೆ ಸರಿಯಲ್ಲ.

3. ನಂತರ 1 ರಿಂದ 4ನೇ ಆರೋಪಿತರು ನಮ್ಮನ್ನು ಹಾಗೂ ಪೊಲೀಸರನ್ನು ಚಿಕ್ಕಕುಂಟನ ಹಳ್ಳಿ ಬಳಿ ಇರುವ ಕೊಳಚೆ ನೀರು ಹರಿಯುವ ವೃಷಭಾವತಿ ನದಿ ಹರಿಯುವ ಬ್ರಿಡ್ಜ್ ಬಳಿ ಕರೆದುಕೊಂಡು ಹೋಗಿ ಮಂಜುನಾಥನ ಮೃತ ದೇಹವನ್ನು ಚೀಲಗಳಿಗೆ ಹಾಕಿ ಬಿಸಾಡಿರುವುದಾಗಿ ಹೇಳಿ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಒಂದು ಗೋಣಿಚೀಲ ತೇಲಾಡುತ್ತಿದ್ದು, ಅದೇ ಚೀಲದಲ್ಲಿ ಮಂಜುನಾಥನ ಮೃತ ದೇಹವನ್ನು ಬಿಸಾಡಿರುವುದಾಗಿ ತೋರಿಸಿದ್ದರು ಎಂದರೆ ಸರಿಯಲ್ಲ. ನಂತರ ನಾವೆಲ್ಲರೂ ಬ್ರಿಡ್ಜ್ ಬಳಸಿಕೊಂಡು ದಡದ ಹತ್ತಿರ ಹೋಗಿ 50 ಅಡಿ ದೂರದಲ್ಲಿದ್ದ ಮೃತ ದೇಹ ಇದ್ದ ಚೀಲವನ್ನು ಸಾರ್ವಜನಿಕರ ಸಹಾಯದಿಂದ ದಡಕ್ಕೆ ತಂದು ಬಿಚ್ಚಿ ಪರಿಶೀಲಿಸಿದಾಗ ಅದರಲ್ಲಿ ಮಂಜುನಾಥನ ಮೃತ ದೇಹ ಇತ್ತು ಎಂದರೆ ಸರಿಯಲ್ಲ. ಮೃತ ದೇಹವನ್ನು 2 ಪ್ಲಾಸ್ಟಿಕ್ ಚೀಲ ಹಾಗೂ 2 ಗೋಣಿ ಚೀಲಗಳಲ್ಲಿ ಹಾಕಿ ಕಟ್ಟಿದ್ದರು ಎಂದರೆ ಸರಿಯಲ್ಲ. ಮೃತ ದೇಹವನ್ನು ನೋಡಿದಾಗ ಆತನ ಕುತ್ತಿಗೆಯಲ್ಲಿ ಕತ್ತರಿಸಿದ ರಕ್ತಗಾಯ ಹಾಗೂ ತಲೆಯಲ್ಲಿ ರಕ್ತಗಾಯ ಆಗಿದ್ದು, ಮೃತ ದೇಹದ ಚರ್ಮ ಸುಲಿಯಲು ಪ್ರಾರಂಭ ಆಗಿತ್ತು ಎಂದರೆ ಸರಿಯಲ್ಲ.

4. ಮೃತ ದೇಹದ ಜೇಬನ್ನು ಪರಿಶೀಲಿಸಿದಾಗ ಕಾರ್ಬನ್ ಕೆ-9 ಕಂಪನಿಯ ಮೊಬೈಲ್ ಕೀಪ್ಯಾಡ್ ಹ್ಯಾಂಡ್ ಸೆಟ್ ಹಾಗೂ 4 ಕೀಗಳು ಇದ್ದ ಕೀ ಬಂಚ್ ಪತ್ತೆ ಆಗಿದ್ದು, ಪೊಲೀಸರು 2 ಪ್ಲಾಸ್ಟಿಕ್ ಚೀಲ, 2 ಗೋಣಿ ಚೀಲ, ಒಂದು ಮೊಬೈಲ್ ಕೀಪ್ಯಾಡ್ ಹ್ಯಾಂಡ್ ಸೆಟ್ ಹಾಗೂ ಕೀ ಬಂಚ್ ಇವುಗಳನ್ನು ಪ್ರತ್ಯೇಕವಾದ ಬಿಳಿ

ಬಟ್ಟೆಗಳಲ್ಲಿ ಹಾಕಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಸ್ಥಳಕ್ಕೆ ಪೊಲೀಸರು ಲ್ಯಾಪ್ ಟಾಪ್ ಹಾಗೂ ಪ್ರಿಂಟರ್ ತಂದಿದ್ದು, ಸ್ಥಳದಲ್ಲಿ ಮಧ್ಯಾಹ್ನ 02:00 ರಿಂದ 04:00 ಗಂಟೆ ಸಮಯದಲ್ಲಿ ನಿಪಿ.3 ರಂತೆ ಮಹಜರ್ ಜರುಗಿಸಿ ನಮ್ಮಗಳ ಹಾಗೂ ಆರೋಪಿತರ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

5. ದಿನಾಂಕ 04-09-2018 ರಂದು ಪೊಲೀಸರು ನಮ್ಮನ್ನು ಠಾಣೆಗೆ ಕರೆಸಿದ್ದು, ಆ ಸಮಯದಲ್ಲಿ 11 ನೇ ಆರೋಪಿ ಸಂತೋಷ್ ಇವರನ್ನು ಬಂಧಿಸಿದ್ದರು ಎಂದರೆ ಸರಿಯಲ್ಲ. 11 ನೇ ಆರೋಪಿಯನ್ನು ಪೊಲೀಸರು ವಿಚಾರಿಸಿದಾಗ ಮಂಜುನಾಥ್ ಇವರನ್ನು ಕೊಲೆ ಮಾಡಿದ ನಂತರ ಆತನ ಮೃತ ದೇಹವನ್ನು ವೃಷಭಾವತಿ ಹೊಳೆಗೆ ಹಾಕಲು ಉಪಯೋಗಿಸಿದ KA-05-MX-3995 ಮಾರುತಿ ಓಮಿನಿ ವ್ಯಾನ್ ಅನ್ನು ಠಾಣೆಯ ಆವರಣದಲ್ಲಿ ತೋರಿಸಿದ್ದು, ಅದನ್ನು ಪೊಲೀಸರು ಪರಿಶೀಲಿಸಿದಾಗ ಕಾರಿನ ಹಿಂಬದಿಯಲ್ಲಿ ರಕ್ತದ ಕಲೆ ಇದ್ದು ಮೃತ ದೇಹವನ್ನು ಸಾಗಿಸುವಾಗ ಆದ ರಕ್ತದ ಕಲೆ ಎಂದು 1 ನೇ ಆರೋಪಿ ತಿಳಿಸಿದ್ದು, ಪೊಲೀಸರು ಹತ್ತಿಯ ಮೂಲಕ ರಕ್ತದ ಕಲೆಯನ್ನು ಸಂಗ್ರಹಿಸಿದ್ದು, ಸದರಿ ಕಾರನ್ನು, ರಕ್ತ ಮಿಶ್ರಿತ ಹತ್ತಿ, ಮಾದರಿ ಹತ್ತಿಯನ್ನು ನನ್ನ ಹಾಗೂ ಚಾಸಾ.16 ರವರ ಸಮಕ್ಷಮ ನಿಪಿ.6 ಮಹಜರ್ ಮೂಲಕ ಬೆಳಿಗ್ಗೆ 09:00 ರಿಂದ 09:45 ರ ಸಮಯದಲ್ಲಿ ಜಪ್ತಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿತರ ಜೊತೆ ಶಾಮೀಲಾಗಿ ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಎಸ್.ಸಿ.ನಂ.343/2019
ಚಾ.ಸಾ.6/ಪ್ರಾ.ಸಾ.4

**<u>ಪಾಟೀ ಸವಾಲುಃ ಆರೋಪಿಪರ ಶ್ರೀ.ಎಮ್.ಎಲ್.ವಕೀಲರಿಂದಃ</u>**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**<u>ಮರುವಿಚಾರಣೆಃಇಲ್ಲ</u>**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.